ಎಷ್ಟು ಮಾತ್ರದ್ದು ಅದರ ಆನಂದ?"

ನಂತರದ ಅಪೂರ್ವನ ಅನಾಮಿಕ ಅರಣ್ಯಪರ್ವದ ಕಥನವೇ ಬೇರೆ. ಅಲ್ಲಿ ನೂರಾರು ಥರದ ನಾಮಿಕ ಅನಾಮಿಕ ಮರಗಿಡಗಳಿವೆ. ನಿಬಿಡ ಪ್ರಕೃತಿ ಶ್ರೇಣಿಗಳಿವೆ. 'ಮುಂಜಾನೆಯ ಗಾಳಿಯ ಮೇಲೆ ಸುವಾಸನೆಯ ಭಾರ ಹೊರಿಸುವ ಹೂಗಳಿವೆ'. ಶಿಕಾರಿಗೆ ತೋಟಾ ಹಾಕಿದ ಬಂದೂಕವನ್ನು ಜಿಂಕೆಯೆಡೆಗೆ ಗುರಿಯಿಟ್ಟಾಗ ಬಳ್ಳಿಯೆಲೆಯ ಮರೆಯಿಂದ ಒಂದು ಜಿಂಕೆ ತಲೆ ಎತ್ತಿ ಅವನನ್ನೇ ನೋಡುತ್ತಿದೆ... "ಹಠಾತ್ತಾಗಿ ಅಪೂರ್ವನ ಎದೆಯಲ್ಲಿ ತಳಮಳವುಂಟಾಯಿತು. ಜಿಂಕೆಯ ಕಣ್ಣುಗಳು ಪೂರ್ತಿಯಾಗಿ ತನ್ನ ಮಗನ ಕಣ್ಣುಗಳಂತೆಯೇ... ಎಲ್ಲ ಹಾಗೇ! ಅಷ್ಟೇ ಅಗಲವಾದ, ನಿಷ್ಪಾಪ ನೋಟ ಬೀರುವ ಸುಂದರ ಕಣ್ಣುಗಳು...'ಅಲ್ಲಿಂದ ಶಿಕಾರಿ ಬಿಟ್ಟುಬಿಟ್ಟ.' ಮೈ ಜುಮ್ಮೆನಿಸುವ ಇಂಥ ನಿರ್ಣಾಯಕ ನಿಮಿಷಗಳು ಮತ್ತೆಮತ್ತೆ ಪಾರದರ್ಶಕವಾಗಿ ಮೂಡಿಬರುತ್ತವೆ ಕಾರಕೂನಿಯನ್ನು ತ್ಯಜಿಸಿ ಹೊರಟ ಸತ್ಯಾರ್ಥಿಯ ಚಾರಣದ ಈ ಕಥನದುದ್ದಕ್ಕೂ.

ಅಹೋಬಲರೇ ಟಂಕಿಸಿದ ಅಪ್ಪಟ ಪದಗಳ ಕೆಲವಾದರೂ ಉದಾಹರಣೆಯನ್ನು ನೀಡಲೇಬೇಕು. ಗಾಡೀಖಾನೆ (garage), ಮನೆಗೀಳು (ಮನೆಯ ನೆನಪು), ಅಸಭ್ಯಸ್ಥ ಕಣ್ಣುಗಳು, ನಿರಾಸಕ್ತ ಪೃಥಿವಿ, ಸಾವಿನಾಚೆಯ ಪ್ರಾಂತ, ಮಂದಭಾಗ್ಯರು, ಮುಖದ ಮೇಲೆ ಕಂಡ 'ಆಂತರಿಕತೆ'!, ವಿಪುಲವಾದ ನಿರ್ಜನತೆ! ವಿರಾಟ್ ಶೂನ್ಯತೆ.

'ಅನಾಮಿಕತೆ' ಮತ್ತು 'ಸಾರ್ಥಕತೆ' ಕುರಿತು ಮತ್ತೆ ಮತ್ತೆ ಜಿಜ್ಞಾಸೆ ಈ ನಿಡುಗಾದಂಬರಿಯ ಹಾಸುಬೀಸಿನುದ್ದಕ್ಕೂ ಬೇರೆ ಬೇರೆ ರೀತಿಯಲ್ಲಿ ನೇರವಾಗಿ ಪರೋಕ್ಷವಾಗಿ ನಡೆಯುತ್ತಲೇ ಇರುತ್ತದೆ. ಮತ್ತು ಆ ಕಾಲದ ಕಟು ವಾಸ್ತವವನ್ನು ಸಾಲುಗಳು ಪ್ರತಿಫಲಿಸುತ್ತಲೇ ಇರುತ್ತವೆ:

'ಹಲ್ಲು ಬಿದ್ದ ಮುದುಕರ ಮುಖದಲ್ಲೂ, ಎದ್ದು ತೋರುವ ಬುದ್ಧಿಹೀನತೆ, ಅವರ ಕಣ್ಣ ನೋಟದಲ್ಲಿ ತೋರುತ್ತಿರುವ ಕುರುಡು ಮೌಢ್ಯ. ಜೀವನದ ವಿರೋಧಿಗಳು ಇವರು. ಆನಂದದ ವಿರೋಧಿಗಳು'.

'ಒಂದು ಹೆಂಡತಿ ಹೋದರೇನು, ಹತ್ತು ಮಾಡಿಕೊಂಡೇನು?'

'ಲೇಖನಿಯ ಒಂದೇ ಎಳೆತದಲ್ಲಿ ಎಷ್ಟೋ ಜನರ ಭವಿಷ್ಯವನ್ನು ಹಾಳು ಮಾಡುವುದರಲ್ಲಿ ನಿಸ್ಸೀಮನೆಂದು ಹೆಸರು ಪಡೆದವ' (ಆಗಲೂ ಇತ್ತು!).

'ಕಲಕತ್ತೆಯಲ್ಲಿ ಎಲ್ಲಿ ನೋಡಿದರೂ ಭಿಕ್ಷುಕರೇ, ಅವರಿಗೆ ಕಾಸು ಕೊಡದೇ ಹೋದರೆ ಬಂದು ಮುಟ್ಟಿ ಬಿಡುತ್ತಾರೆ... ಆಗ ಮನೆಗೆ ಹೋಗಿ ಬಟ್ಟೆಗಳನ್ನೆಲ್ಲ ಕಳಚಿ ಸ್ನಾನ ಮಾಡಬೇಕಾಗುತ್ತೆ..!'

ಇಂಥ ಕ್ರೂರ ವಾಸ್ತವದ ಜೊತೆಗೇ, 'ವಿರಾಟವಾದ ಅಸೀಮತೆ'ಗೆ ನಮ್ಮ 'ಒಳಗಣ್ಣು' ತೆರೆಸುವ ಶಕ್ತಿ ಈ ಕೃತಿಯದು. ಅದಕ್ಕೆ ತಕ್ಕುದಾದ ಭಂಗಿಯ ಕನ್ನಡ ಅಹೋಬಲರದು. ಹಾಗೆಂದರೇನು ಅಂತ ಹೇಳಲು ನನಗೆ ಬರುವುದಿಲ್ಲ. ಆದರೆ ಕನ್ನಡ ಬರವಣಿಗೆಯ ವಿಶಿಷ್ಟ ಭಂಗಿಯೊಂದನ್ನು ನಾನು ಯಾವತ್ತೂ ಅಹೋಬಲರ ಕನ್ನಡದಲ್ಲಿ ಕಂಡಿದ್ದೇನೆ. ಅದು ಇಡೀ ಕೃತಿಯ ಮೇಲೆ 'ಆಂತರಿಕತೆ'ಯ ಬೆಳಕನ್ನು ಪಸರಿಸುವಂಥದು. ಇಲ್ಲಿ ಒಂದು ಕಡೆ ಬರುತ್ತದೆ: 'ಬೆರಗಾಗುವ ಸಾಮರ್ಥ್ಯ ಅತಿ ದೊಡ್ಡ ಸಾಮರ್ಥ್ಯ! ಯಾವುದರಿಂದಲೂ ವಿಸ್ಮಿತವಾಗದೆ ಮುಗ್ಧನಾಗದೆ ಇರುವ ಮನುಷ್ಯ ಪ್ರಾಣ ಇದ್ದರೂ ಇಲ್ಲದ ಹಾಗೆ!' ಇದು ಅವರದೇ ಒಕ್ಕಣೆಯಲ್ಲಿ ಹೇಳುವುದಾದರೆ 'ಆತ್ಮದ ಅದೃಷ್ಟ ಲಿಪಿ'.

'ಮಹಾಯಾತ್ರಿಕ' ಪ್ರಕಟಿಸಿದ ಓಂಕಾರ್ ಪ್ರಕಾಶನ ಸಂಸ್ಥೆಯವರೇ ಈ ಕೃತಿಯನ್ನೂ ಪ್ರಕಟಿಸಿ ಓದುಗರಿಗೆ ಉಪಕಾರ ಮಾಡಿದ್ದಾರೆ. ಕನ್ನಡಿಗರಿಗೆ ಇದಕ್ಕಿಂತ ಅಮೂಲ್ಯ ಉಡುಗೊರೆ ಬೇರೆ ಇಲ್ಲ. ಇದರಲ್ಲಿನ ಒಂದು ಪರಿಚ್ಛೇದದೊಂದಿಗೆ ನನ್ನ ಟಿಪ್ಪಣಿ ಮುಗಿಸುತ್ತೇನೆ.

'ನಿದ್ದೆ ಮಾಡುತ್ತಿರುವ ಹುಡುಗನನ್ನು ನೋಡುತ್ತಿದ್ದರೆ ಹೃದಯ ಉಕ್ಕಿ ಬರುತ್ತದೆ... ಪಾಪ... ಎಷ್ಟು ಚಿಕ್ಕ, ದಿಕ್ಕಿಲ್ಲದ ಮುಗ್ಧ ಮಗು? ಎಷ್ಟು ಪರಾಧೀನ! ಈ ಹುಡುಗ, ಇದುವರೆಗೆ ಎಲ್ಲಿದ್ದ? ಈ ಚಿನ್ನದಂಥ ಹುಡುಗ ಸಾಮಾನ್ಯವಾಗಿ ಬೇಡಿಕೊಂಡರೂ ಹುಟ್ಟುವುದಿಲ್ಲ... ತಾನೂ ಮತ್ತು ಅಪರ್ಣಾ ಸೇರಿ ಇವನನ್ನು ಯಾವ ಅನಂತದಿಂದ ಹೊರತಂದಿದ್ದವು! ಹಾಗೆ ಈ ಲೋಕಕ್ಕೆ ಹೊರತಂದ ಪಾಪ, ಈ ಕೂಸು ಕಂದನನ್ನು ಹೀಗೆ ಒಬ್ಬನನ್ನೇ ತೊರೆದು ತಾನೆಲ್ಲಿಗೋ ಅಲೆಯಲು ಹೋದರೆ (ಈಗ ಇನ್ಯಾವುದೋ ಲೋಕದಲ್ಲಿರುವ) ಅಪರ್ಣಾ ಸಹಿಸುವಳೆ...'

●